ಆ) ದೂರುಗಳು ಹಾಗೂ ಟೀಕೆಗಳು ಸಂಬಂಧಿಸಿದ ಇಲಾಖೆಗಳು ನೀಡುವ ಸ್ಪಷ್ಟೀಕರಣ, ಸಮಜಾಯಿಷಿ ಹಾಗೂ ಪ್ರತ್ಯುತ್ತರಗಳನ್ನು ದೂರು ಹಾಗೂ ಟೀಕೆಗಳು ಪ್ರಕಟಗೊಂಡ ಪತ್ರಿಕೆಗಳಿಗೆ ಪ್ರಕಟಣೆಗಾಗಿ ಬಿಡುಗಡೆ ಮಾಡಲಾಗುತ್ತದೆ.

ಇ) ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ಒಟ್ಟಾರೆ 16 ಕನ್ನಡ ದಿನಪತ್ರಿಕೆಗಳು ನಾಲ್ಕು ಉರ್ದು ಭಾಷಾ ದಿನಪತ್ರಿಕೆಗಳು ಆರು ಆಂಗ್ಲ ಭಾಷಾ ದಿನಪತ್ರಿಕೆಗಳು ಒಂದು ಸಂಸ್ಕೃತ ಭಾಷಾ ದಿನಪತ್ರಿಕೆ, 10 ವಾರ ಪತ್ರಿಕೆಗಳು ಹಾಗೂ ಮೂರು ಪಾಕ್ಷಿಕ ಪತ್ರಿಕೆಗಳು ನಿಯತವಾಗಿ ಪ್ರಕಟಿಕೊಳ್ಳುತ್ತಿವೆ.

ಪತ್ರಿಕೆಗಳು ಪ್ರಕಟಿಸಲು ರಹದಾರಿ ಅಗತ್ಯವಿಲ್ಲ. ಪತ್ರಿಕಾ ಹಾಗೂ ನೊಂದಣಿ ಕಾಯ್ದೆ 1867ರ ಅನ್ವಯ ಭಾರತೀಯ ಪತ್ರಿಕಾ ನೊಂದಣಿ ಅಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿಕೊಂಡು ನೊಂದಣಿ ಪ್ರಮಾಣ ಪತ್ರ ಪಡೆಯಬೇಕಿರುವುದು ಮಾತ್ರ ಕಡ್ಡಾಯ.

ನೊಂದಣಿ ಪ್ರಮಾಣ ಪತ್ರ ಹೊಂದಿರುವ ಪತ್ರಿಕೆಗಳ ವಿರುದ್ಧ ಭಾರತೀಯ ಪತ್ರಿಕಾ ನೊಂದಣಿ ಅಧಿಕಾರಿಗಳು (Registrar of Newspaper for India) ಕ್ರಮ ಕೈಗೊಳ್ಳಬಹುದಾಗಿದೆ.

ಈ) 30 ಗ್ರಾಮ ಪಂಚಾಯಿತಿ, ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಗ್ರಂಥಾಲಯಕ್ಕೆ 2 ದಿನಪತ್ರಿಕೆ, 2 ವಾರಪತ್ರಿಕೆ ಹಾಗೂ 3 ಮಾಸಪತ್ರಿಕೆಗಳನ್ನು ಸರಬರಾಜು ಮಾಡಲಾಗುತ್ತಿದೆ, (7X30=210)

ಉ) ಕರ್ನಾಟಕ ವಾರ್ತೆ, ಜನಪದ, ಮಾರ್ಚ್ ಆಫ್ ಕರ್ನಾಟಕ, ಮಾನ್ಯ ಶ್ರೀ ಗುರುಸ್ವಾಮಿ ಎ.ಎಸ್., ಶಾಸಕರು ದೇಣಿಗೆ ನೀಡಿರುವ ಉದ್ಯೋಗ ವಾರ್ತೆ ಪತ್ರಿಕೆಯನ್ನು ಮತ್ತಿತರ ವಾರ್ತಾ ಬುಲೇಟಿನ್‌ಗಳನ್ನು ಕೆಲವು ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಲಾಗುತ್ತಿದೆ.

ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ ಲೋಪ ದೋಷ

1051 (1048) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 11-10-99ರ ನಂತರ ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ ಸತ್ತಿರುವ ಪ್ರಾಣಿಗಳ ಸಂಖ್ಯೆ ಎಷ್ಟು?

ಆ) ಅಸ್ವಾಭಾವಿಕ ರೀತಿಯಲ್ಲಿ ಸತ್ತ ಪ್ರಾಣಿಗಳ ಸಂಖ್ಯೆ ಎಷ್ಟು? ಅವುಗಳು ಯಾವುವು, ಈ ಬಗ್ಗೆ ಕಾರಣ ನಡೆಸಲಾಗಿದೆಯೇ, ವರದಿಯ ಪರಿಣಾಮವೇನು?

ಇ) ಲೋಪದೋಷ ಗುರುತಿಸಿದ್ದರೆ ಸಂಬಂಧಪಟ್ಟ ಸಿಬ್ಬಂದಿಯ ವಿರುದ್ಧ ಕೈಗೊಂಡಿರುವ ಕ್ರಮವೇನು?

ಈ) ಪ್ರಾಣಿಸಂಗ್ರಹಾಲಯದಲ್ಲಿರುವ ಬೋನು ಗೂಡುಗಳ ಸಂಖ್ಯೆಗತ ಅನುಗುಣವಾಗಿ ಎಲ್ಲಾವೂ ಇದೆಯೇ?

ಉ) ಇಲ್ಲವಾದರೆ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸತ್ತ ಪ್ರಾಣಿಗಳ ಸಂಖ್ಯೆ 27

ಆ) ಅಸ್ವಾಭಾವಿಕ ಕಾರಣಗಳಿಂದ ನಾವು ಉಂಟಾಗಿರುವ ಬಗ್ಗೆ ವರದಿ ಆಗಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಹೌದು

ಉ) ಉದ್ಭವಿಸುವುದಿಲ್ಲ

ರಸ್ತೆ ನಿರ್ಮಾಣ ನಿಗಮ ಕುರಿತು

1052 (1050) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಸ್ತೆ ನಿರ್ಮಾಣ ನಿಗಮ ಅಸ್ತಿತ್ವಕ್ಕೆ ಬಂದ ನಂತರ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ಒತ್ತಡ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಅನಾವಶ್ಯಕವಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ಎಷ್ಟು ಕಛೇರಿಗಳನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆ;

ಈ) ಈ ರೀತಿ ಮುಚ್ಚಲಾಗಿರುವ ಸರ್ಕಾರಿ ಸಿಬ್ಬಂದಿಯ ಸೇವೆಯನ್ನು ಬೇರೆ ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುವುದು;

ಉ) ಮೈಸೂರು- ಬೆಂಗಳೂರು ನಡುವಿನ ಎಕ್ಸ್‌ಪ್ರೆಸ್ ಹೈವೇ ಕಾರಿಡಾರ್‌ಗಳನ್ನು ಶೀಘ್ರವೇ ಜಾರಿಗೊಳಿಸಲಾಗುವುದು ಎಂಬ ಆಶ್ವಾಸನೆಯನ್ನು ಪದೇ ಪದೇ ನೀಡಿದಾಗ್ಯೂ ಯಾವುದೇ ರೀತಿ ಪ್ರಗತಿ ಕಂಡು ಬರುತ್ತಿಲ್ಲ ಮತ್ತು ಇದನ್ನು ಯಾವಾಗ ಪ್ರಾರಂಭಿಸಿ ಮುಗಿಸಲು ಹಾಕಿಕೊಂಡಿರುವ ಕಾಲಮಿತಿ ಏನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಸ್ತೆ ನಿರ್ಮಾಣ ನಿಗಮ ಅಸ್ತಿತ್ವಕ್ಕೆ ಬಂದನಂತರ ಲೋಕೋಪಯೋಗಿ ಇಲಾಖೆಯ ಕಾರ್ಯದ ಒತ್ತಡದ ಮೇಲೆ ಯಾವುದೇ ಪರಿಣಾಮ ಬೀರಿರುವುದಿಲ್ಲ.

ಆ) 'ಅ'ನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರ ಮುಂದೆ ಈ ರೀತಿ ಯಾವುದೇ